ಒಂದು ದಿನ ನಿತ್ಯದ ದಾರಿಯಲ್ಲಿ ಬರುತ್ತಿದ್ದೆವು. ವಿಶ್ವವಿದ್ಯಾನಿಲಯದ ರಸ್ತೆಯ ಕಾಮಗಾರಿ ನಡೆದಿತ್ತು. ಆದರೆ, ಫುಟ್‌ಪಾತನ್ನು ಆಕ್ರಮಿಸಿ ರಸ್ತೆಗೆ ಅಡ್ಡಲಾಗಿ ಇದ್ದ ಹುತ್ತ ಹಾಗೇ ಇತ್ತು. ಇದೇನು ಹುತ್ತ ಜನಗಳ, ವಾಹನಗಳ ಓಡಾಟಕ್ಕೆ ತೊಡಕಾಗಿದ್ದರೂ ಇದನ್ನು ಹಾಗೇ ಬಿಟ್ಟಿದ್ದಾರಲ್ಲ ಎಂದು ಆಶ್ಚರ್ಯವೆನಿಸಿ ಕೇಳಿದಾಗ ನಮ್ಮ ಆಟೋ ಚಾಲಕ ಹೇಳಿದ 'ಉತ್ತದೊಳಗೆ ನಾಗರಾಜ ಮಲಗವ್ನೆ. ಅವನ್ಗೆ ವಯಸ್ಸಾಗಿದೆ. ಬಾಲ ಮೊಂಡು. ಉತ್ತ ಒಡದ್ರೆ, ಅವನ್ಗೆ ಕ್ವಾಪ ಬತ್ತದೆ. ಆಮೇಲೆ ನಿಮ್ಮ ಗ್ರಾಚಾರ ನೆಟ್ಟಗಿರಲ್ಲ ಅಂತ ಒಬ್ಬ ಪೂಜಾರಯ್ಯ ಏಳ್ದ. ಅದಕ್ಕೆ ಇಲ್ಲಿ ಎಲ್ರಿಗೂ ಮೇಲ್ಪಟ್ಟವರು ಪೂಜೆ ಮಾಡ್ಸಿ ಸುಮ್ಮನಿರೋದು.'

ಹೀಗೆ ಒಗಟಿನಂತೆ ಮಾತನಾಡುವ ವ್ಯಕ್ತಿಯೇ ನಮ್ಮ ದಿನನಿತ್ಯದ ಆಟೋ ಸಾರಥಿ. ಮತ್ತೆ ಕೋಬ್ರಾಕಿಂಗ್ ಯಾರು? ಈ ಹೆಸರು ಕೇಳಿದಾಗ ಈಗೊಂದು ಐದಾರು ದಶಕಗಳ ಹಿಂದಿನ ಜಮಾನದವರಿಗಾದರೆ ಕಿಂಗ್ ಕಾಂಗ್, ದಾರಾಸಿಂಗ್, ಫ್ಲಾಷ್ ಗಾರ್ಡನ್ ಮುಂತಾದ ಕುಸ್ತಿಪಟುಗಳ ನಡುವೆ ನಡೆಯುತ್ತಿದ್ದ ರೋಚಕ ಕುಸ್ತಿ ಪಂದ್ಯಗಳು ನೆನಪಾಗುತ್ತವೆ. ಆಗ ಕುಸ್ತಿ ವೀಕ್ಷಣೆ ಗಂಡಸರಿಗೆ ಮಾತ್ರ! ಇಂದು ಇವನ್ಯಾರು ಕೋಬ್ರಾಕಿಂಗ್ ಎಂದರೆ? ಅವನೇ ನಮ್ಮ ಆಟೋ ಸಾರಥಿ. ನಾವು ನಮ್ಮ ಗುಪ್ತ ಭಾಷೆಯಲ್ಲಿ ಪ್ರೀತಿಯಿಂದ ಆತನಿಗೆ ಕೋಬ್ರಾಕಿಂಗ್ ಎಂಬ ಅತಿಶಯದ ಹೆಸರು ಕೊಟ್ಟುಕೊಂಡಿದ್ದೇವೆ. ಈತನೊಬ್ಬ ಉತ್ತಮ 'ವಡವಡ' ವಾಕ್ಪಟು. ಸದಾ ನಮಗೆ ತನ್ನ ಸಹಾಯ ಹಸ್ತವನ್ನು ಚಾಚುವ ಕೋಬ್ರಾಕಿಂಗ್‌ನ್ನು ಸುಲಭವಾಗಿರಲಿ ಎಂದು ಮುಂದೆ ಚಾಲಕನೆಂದೇ ಸಂಭೋದಿಸುವೆ.

ಹಿಂದಿನ ನಮ್ಮ ಕವಿಗಳು ವಾಗ್ದೇವಿಯ ಭಂಡಾರವನ್ನೇ ಸೂರೆಮಾಡಿ ನಮಗೆ ಸಾಹಿತ್ಯದ ರಸದೂಟ ಉಣಬಡಿಸಿದರು. ನಮ್ಮ ಕೋಬ್ರಾಕಿಂಗ್‌ನೂ ಹೀಗೆ ಒಂದು ಕೊಪ್ಪಲಿನ ಕಥಾಸರಿತ್ಸಾಗರದಿಂದ ಅನೇಕ ಎಪಿಸೋಡುಗಳನ್ನು ಆಯ್ದು ಆಗಾಗ್ಗೆ ನಮಗೆ ಉಣಬಡಿಸುತ್ತಿರುತ್ತಾನೆ. ಇವುಗಳಲ್ಲಿ ಕೆಲವನ್ನಾದರೂ ನಿಮಗೆ ತಲುಪಿಸುವ ತವಕ ನನಗೆ.

ನಮ್ಮ ವಾಕ್ಪಟು ಚಾಲಕ ಆಗಾಗ್ಗೆ ಒಗಟಿನಂತೆ ಮಾತಾಡುತ್ತ ತನಗೆ ಅಸಮಾಧಾನ ಇರುವವರ ಮೇಲೆ ವಾಗ್ಬಾಣಗಳನ್ನು ಬಿಡುತ್ತಿರುತ್ತಾನೆ. ಒಮ್ಮೆ ಮಾರ್ಕೆಟ್ಟಿಂದ ಬರುವಾಗ ಸಿಗ್ನಲ್ ಹತ್ತಿರ ಬರುತ್ತಿದ್ದೆವು. ಸ್ವಗತ ಲಹರಿ ಶುರುವಾಯಿತು. 'ನೋಡಿ ಮೊದಲಾದ್ರೆ ಸಾಸ್ತ್ರ ಏಳೋವ್ರು ಬೀದಿ ಪಕ್ಕದಲ್ಲಿ ಕುಂತ್ಗಂಡು, ಬಟ್ಟೆ ಆಸ್ಕಂಡು ಕವಡೆ ಬಿಟ್ಟು ಸಾಸ್ತ್ರ ಏಳಕ್ಕೆ ಕಾಯ್ತ ಇರೋವ್ರು. ಈಗ ನೋಡಿ, ಕಾರಲ್ಲಿ ಗಿರಾಕಿಗಳ ಮನೆಗೆ ಒಯ್ತಾರೆ. ಕಾಳೀನ ಬೋಳಿ ಮಾಡ್ತಾರೆ. ಗಂಡ ಎಂಡ್ರನ್ನ ಅಗಲಿಸೊ ವಸೀಕರಣ ಮಾಡ್ತಾರೆ. ಯಾರ್ದೊ ಎಡ್ತಿ ಇನ್ಯಾವನೊ ಇಂದೆ ಒಯ್ತಾಳೆ' ಎಂದು ಬಡಬಡಿಸುತ್ತಿದ್ದಾಗ, ಪಕ್ಕದ ಕಾರಿನಲ್ಲಿ ಸಿಗ್ನಲ್‌ಗಾಗಿ ಕಾಯುತ್ತಿದ್ದ ಮೀಸೆ ರಾವುತ ದಪ್ಪ ಕಣ್ಣುಗಳನ್ನು ಮೆಡ್ಡರಿಸಿ ನಮ್ಮನ್ನೇ ನೋಡತೊಡಗಿದ. ಅವನ ಬೆರಳುಗಳ ದಪ್ಪ ಉಂಗುರಗಳು, ಮುಂಗೈಯಲ್ಲಿದ್ದ ಸೇದೊ ಹಗ್ಗದಂತಹ ಚಿನ್ನದ ಚೈನು ನೋಡಿ ಇವನ್ಯಾರೊ ಭಾರೀ ಆಸಾಮಿ, ನಮಗೆ ಹಾಕೇ ಬಿಡಬಹುದು ಎಂದು ಒಳಗೊಳಗೆ ಜೀವ ಚಡಪಡಿಸಿತು. ಸಿಗ್ನಲ್ ಸಿಕ್ಕಿತು. ಸದ್ಯ ಅವನು ಭರ್ ಎಂದು ಮುಂದೆ ಹೋದ. ನಾವು 'ಟುಕ್ ಟುಕ್' ನಿಧಾನ. 'ಅಲ್ಲಾ, ಪಕ್ಕದ ಕಾರ್ನವ್ನು ನಮ್ಮನ್ನ ತಿನ್ನೊ ಹಂಗೆ ನೋಡುತ್ತಿದ್ದನಲ್ಲಾ' ಅಂದೆ. ನಮ್ಮ ಚಾಲಕ ನಿರಾಳವಾಗಿ 'ಅಯ್ಯೊ ಬನ್ನಿ. ಇದ್ದದ್ದು ಇದ್ದಂಗೇಳಿದ್ರೆ ಎದ್ ಬಂದು ಎದೆಗೆ ಒದ್ದಂಗಾಯ್ತು ಅದಕ್ಕೆ ಕಡ್ದು ಓದ' ಎಂದು ಮಾತು ಮುಗಿಸಿದ.

*****